Akashvani: Bangalore
National Bulletin In Kannada
21.10.2025 : 13.10hrs
**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

21.10.2025 : 13.10hrs
*******

**ಮುಖ್ಯಾಂಶಗಳು**

1. ಇಂದು ಪೊಲೀಸ್ ಸಂಸ್ಮರಣಾ ದಿನ; ಉಪರಾಷ್ಟ್ರಪತಿ, ಪ್ರಧಾನಿ, ಗೃಹ ಸಚಿವರು ಸೇರಿ ಗಣ್ಯರಿಂದ ಗೌರವ ನಮನ ಸಲ್ಲಿಕೆ
2. ಬಲಿಷ್ಠ ಪೊಲೀಸ್ ಪಡೆಯಿಂದ ಮಾತ್ರ ಸಧೃಢ ರಾಷ್ಟ್ರ ನಿರ್ಮಾಣ- ಸಚಿವ ರಾಜನಾಥ್ ಸಿಂಗ್
3. ಬಿಹಾರ ವಿಧಾನಸಭಾ ಚುನಾವಣೆ; ಜಾಹೀರಾತುಗಳಿಗೆ ಪೂರ್ವ ಪ್ರಮಾಣೀಕರಣ ಪತ್ರ ಪಡೆದುಕೊಳ್ಳಲು ಚುನಾವಣಾ ಆಯೋಗ ನಿರ್ದೇಶನ
4. ಇಂದಿನಿಂದ ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನಿ; ಭಾರತದ ಲಕ್ಷ್ಯ ಸೇನ್, ಚಿರಾಗ್ ಶೆಟ್ಟಿ-ಸಾತ್ವಿಕ್ ಜೋಡಿ ಸೆಣಸು

*******

ಪೊಲೀಸ್ ಸ್ಮರಣಾರ್ಥ ದಿನವಾದ ಇಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಅವರು ಪೊಲೀಸ್ ಸಿಬ್ಬಂದಿಯ ಅನುಕರಣೀಯ ಧೈರ್ಯ ಮತ್ತು ಪರಮೋಚ್ಛ ತ್ಯಾಗಕ್ಕೆ ಗೌರವ ಸಲ್ಲಿಸಿದ್ದಾರೆ.ಅವರು ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ, ರಾಷ್ಟ್ರವನ್ನು ರಕ್ಷಿಸಲು ಮತ್ತು ಜನರ ಸುರಕ್ಷತೆ ಮತ್ತು ಯೋಗಕ್ಷೇಮವನ್ನು ಖಾತ್ರಿಪಡಿಸಿಕೊಳ್ಳಲು ಪೊಲೀಸರ ಅಚಲ ಬದ್ಧತೆಯನ್ನು ನಾವು ಗೌರವಿಸುತ್ತೇವೆ ಎಂದು ಅವರು ಹೇಳಿದ್ದಾರೆ. ಅಲ್ಲದೆ, ಬಿಕ್ಕಟ್ಟು ಮತ್ತು ಮಾನವೀಯ ಅಗತ್ಯದ ಸಮಯಗಳಲ್ಲಿಯೂ ಸಹ ದೃಢವಾದ ಬದ್ಧತೆ ಮತ್ತು ಸೇವೆ ಸಲ್ಲಿಸುವ ಮೂಲಕ, ಪೊಲೀಸರು ಶೌರ್ಯ, ಮತ್ತು ಕರ್ತವ್ಯ ಪ್ರಜ್ಞೆಯನ್ನು ಸದಾ ಪ್ರದರ್ಶಿಸುತ್ತಿದ್ದಾರೆ ಎಂದು ಉಪರಾಷ್ಟ್ರಪತಿ ತಿಳಿಸಿದ್ದಾರೆ.

*******

ಪೊಲೀಸ್ ಸಂಸ್ಮರಣಾ ದಿನದ ಅಂಗವಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇಂದು ಕರ್ತವ್ಯದಲ್ಲಿದ್ದಾಗ ಪರಮೋಚ್ಚ ತ್ಯಾಗ ಮಾಡಿದ ಪೊಲೀಸರ ಸೇವೆಯನ್ನು ಸ್ಮರಿಸಿ ಅವರ ಧೈರ್ಯ

ಮತ್ತು ಶೌರ್ಯಕ್ಕೆ ಗೌರವ ನಮನ ಸಲ್ಲಿಸಿದ್ದಾರೆ. ಅವರು ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್‌ನಲ್ಲಿ ಪೊಲೀಸರ ದೃಢ ಬದ್ಧತೆಯಿಂದಾಗಿ ರಾಷ್ಟ್ರ ಮತ್ತು ಜನರು ಸುರಕ್ಷಿತರಾಗಿದ್ದಾರೆ. ಬಿಕ್ಕಟ್ಟಿನ ಸಂದರ್ಭದಲ್ಲಿ ಅವರ ಶೌರ್ಯ ಮತ್ತು ಅಚಲ ಬದ್ಧತೆ ಶ್ಲಾಘನೀಯ ಎಂದು ಹೇಳಿದ್ದಾರೆ.ಪೊಲೀಸ್ ಸಂಸ್ಮರಣಾ ದಿನದಲ್ಲಿಂದು ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ಪೊಲೀಸ್ ಸಿಬ್ಬಂದಿಗೆ ಶುಭಕೋರಿದ್ದಾರೆ. ಆಂತರಿಕ ಭದ್ರತೆ ಹಾಗೂ ಅಪರಾದಗಳನ್ನು ತಡೆಯುವಲ್ಲಿ ಪೊಲೀಸರು ಅನುಪಮ ಸೇವೆ ಸಲ್ಲಿಸುತ್ತಿದ್ದಾರೆ ಜೊತೆಗೆ ನಾಗರಿಕರ ಹಕ್ಕುಗಳನ್ನು ರಕ್ಷಿಸುತ್ತಿದ್ದಾರೆ ಎಂದು ತಿಳಿಸಿದ್ದಾರೆ. ರಾಷ್ಟ್ರಕ್ಕಾಗಿ ಹುತಾತ್ಮರಾದ ಪೊಲೀಸರಿಗೆ ಅವರು ಗೌರವ ನಮನ ಸಲ್ಲಿಸಿದ್ದಾರೆ.

*******

ಸುಭದ್ರ ಪೊಲೀಸ್ ಪಡೆಯಿಂದ ಮಾತ್ರ ಸುಭದ್ರ ರಾಷ್ಟ್ರ ನಿರ್ಮಾಣ ಸಾಧ್ಯ ಮತ್ತು ಇದು ಸರ್ಕಾರದ ಗುರಿಯಾಗಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ. ಅವರು ದೆಹಲಿಯಲ್ಲಿ ಇಂದು ಪೊಲೀಸ್ ಸಂಸ್ಮರಣಾ ದಿನದ ಅಂಗವಾಗಿ ರಾಷ್ಟ್ರೀಯ ಪೊಲೀಸ್ ಸ್ಮಾರಕದಲ್ಲಿ ಹುತಾತ್ಮ ಪೊಲೀಸ್ ಸಿಬ್ಬಂದಿಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಮಿಲಿಟರಿ ಮತ್ತು ಪೊಲೀಸ್, ಎರಡು ಬೇರೆ ಬೇರೆಯಾಗಿದ್ದರು ಅವುಗಳ ಗುರಿ ರಾಷ್ಟ್ರದ ಭದ್ರತೆಯನ್ನು ಕಾಪಾಡುವುದಾಗಿದೆ. ಮಿಲಿಟರಿ ಭೌಗೋಳಿಕ ಏಕತೆಯನ್ನು ಖಾತ್ರಿಪಡಿಸಿದರೆ, ಪೊಲೀಸರು ಭಾರತದ ಸಾಮಾಜಿಕ ಐಕ್ಯತೆಯನ್ನು ರಕ್ಷಿಸುತ್ತಾರೆ. ಇಂದಿನ ದಿನಗಳಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಯ್ದುಕೊಳ್ಳುವ ಜೊತೆಗೆ ಪೊಲೀಸರು ಇತರೆ ಶಕ್ತಿಗಳ ವಿರುದ್ಧವೂ ಹೋರಾಡಬೇಕಿದೆ ಎಂದು ಹೇಳಿದರು.ದೇಶ ಅಮೃತ ಕಾಲವನ್ನು ಪ್ರವೇಶಿಸಿದೆ ಮತ್ತು ೨೦೪೭ರ ವೇಳೆಗೆ ವಿಕಸಿತ ಭಾರತ ನಿರ್ಮಾಣದ ಗುರಿ ಇದೆ ಅದಕ್ಕಾಗಿ ಹಿಂದೆಂದಿಗಿಂತಲೂ ಈಗ ದೇಶದ ಆಂತರಿಕ ಮತ್ತು ಬಾಹ್ಯ ಭದ್ರತೆಯ ನಡುವೆ ಸಮತೋಲನ ಕಾಯ್ದುಕೊಳ್ಳಬೇಕಿದೆ ಎಂದು ರಾಜನಾಥ್ ಸಿಂಗ್ ತಿಳಿಸಿದರು. ಪ್ರತೀ ವರ್ಷ ಅಕ್ಟೋಬರ್ ೨೧ ಅನ್ನು ಪೊಲೀಸ್ ಸಂಸ್ಮರಣಾ ದಿನವನ್ನಾಗಿ ಆಚರಿಸಲಾಗುವುದು. ಲಡಾಕ್ ನಲ್ಲಿ ಚೀನಾದ ಪಡೆಗಳು ದಾಳಿ ನಡೆಸಿದಾಗ ೧೦ ಕರ್ತವ್ಯ ನಿರತ ಪೊಲೀಸರು ಹುತಾತ್ಮರಾಗಿದ್ದರು. ಅವರಿಗೆ ಗೌರವ ನಮನ ಸಲ್ಲಿಸಲು ಈ ದಿನವನ್ನು ಆಚರಿಸಲಾಗುತ್ತಿದೆ. ಕೇಂದ್ರ ಗೃಹ ಖಾತೆ ರಾಜ್ಯ ಸಚಿವ ಬಿ.ಸಂಜಯ್ ಕುಮಾರ್, ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆಯ ಮುಖ್ಯಸ್ಥರು ಕೇಂದ್ರ ಪೊಲೀಸ್ ಸಂಘಟನೆಗಳ ಮುಖ್ಯಸ್ಥರು

ಹುತಾತ್ಮರಿಗೆ ಗೌರವ ನಮನ ಸಲ್ಲಿಸಿದರು. ಇದೇ ವೇಳೆ ಕೇಂದ್ರೀಯ ಸಶಸ್ತ್ರ ಪೊಲೀಸ್ ಪಡೆ ಹಾಗೂ ದೆಹಲಿ ಪೊಲೀಸರಿಂದ ಜಂಟಿ ಪಥ ಸಂಚಲನ ನಡೆಯಿತು.

*******

ಬಿಹಾರ ವಿಧಾನ ಸಭಾ ಚುನಾವಣೆ ಮುನ್ನಾದಿನ ಹಾಗೂ ಮತದಾನದ ದಿನ ಪ್ರಕಟಿಸುವ ಎಲ್ಲಾ ಮುದ್ರಣ ಮಾಧ್ಯಮದ ಜಾಹಿರಾತುಗಳಿಗೆ ರಾಜಕೀಯ ಪಕ್ಷಗಳು ಮತ್ತು ಅಭ್ಯರ್ಥಿಗಳು ಮಾಧ್ಯಮ ಪ್ರಮಾಣೀಕರಣ ಮತ್ತು ಮೇಲ್ವಿಚಾರಣ ಸಮಿತಿಯಿಂದ ಪೂರ್ವ ಪ್ರಮಾಣೀಕರಣ ಪತ್ರ ಪಡೆದುಕೊಂಡಿರಬೇಕು ಎಂದು ಕೇಂದ್ರ ಚುನಾವಣಾ ಆಯೋಗ ನಿರ್ದೇಶನ ನೀಡಿದೆ. ನ್ಯಾಯ ಸಮ್ಮತ ಚುನಾವಣೆಯನ್ನು ಖಾತ್ರಿಪಡಿಸುವ ಉದ್ದೇಶದಿಂದ ಆಯೋಗ ಈ ನಿರ್ಧಾರವನ್ನು ಕೈಗೊಂಡಿದೆ.  ಬಿಹಾರ ವಿಧಾನಸಭಾ ಚುನಾವಣೆಯ ಮೊದಲನೆಯ ಹಂತಕ್ಕೆ ನವಂಬರ್ ೫ ಮತ್ತು ೬ ಹಾಗೂ ಎರಡನೇ ಹಂತಕ್ಕೆ ನವಂಬರ್ ೧೦ ಮತ್ತು ೧೧ ರಂದು ಜಾಹಿರಾತುಗಳ ಪ್ರಕಟಣೆಗೆ ದಿನಾಂಕ ನಿಗದಿ ಮಾಡಿದೆ. ಎಂಸಿಎಂಸಿ ಅನ್ನು ಸಕ್ರಿಯಗೊಳಿಸಲಾಗಿದ್ದು, ಅದು ಜಾಹಿರಾತುಗಳನ್ನು ಪರಿಶೀಲಿಸಿ ಪ್ರಮಾಣೀಕರಣ ಮಾಡಲಿದೆ. ಬಿಹಾರ ವಿಧಾನಸಭೆಗೆ ಎರಡು ಹಂತಗಳಲ್ಲಿ ನವಂಬರ್ ೬ ಮತ್ತು ೧೧ ರಂದು ಚುನಾವಣೆ ನಡೆಯಲಿದೆ.

*******

ಪ್ರಧಾನಿ ನರೇಂದ್ರ ಮೋದಿ ಅವರು ಇದೇ  ೨೬ ರಂದು ಆಕಾಶವಾಣಿಯ ತಮ್ಮ  ಮನ್ ಕಿ ಬಾತ್ ಕಾರ್ಯಕ್ರಮದಲ್ಲಿ ದೇಶ ಮತ್ತು ವಿದೇಶಗಳ ಜನರೊಂದಿಗೆ ತಮ್ಮ ಅನಿಸಿಕೆಗಳನ್ನು ಹಂಚಿಕೊಳ್ಳಲಿದ್ದಾರೆ. ಇದು ಮಾಸಿಕ ರೇಡಿಯೋ ಕಾರ್ಯಕ್ರಮದ ೧೨೭ನೇ ಸಂಚಿಕೆಯಾಗಲಿದೆ. ಜನರು ಟೋಲ್-ಫ್ರೀ ಸಂಖ್ಯೆ ೧೮೦೦-೧೧-೭೮೦೦ ಮೂಲಕ ಕಾರ್ಯಕ್ರಮಕ್ಕಾಗಿ ತಮ್ಮ ಅನಿಸಿಕೆ ಮತ್ತು ಸಲಹೆಗಳನ್ನು ಸಲ್ಲಿಸಬಹುದು ಅಥವಾ ನರೇಂದ್ರ ಮೋದಿ ಅಪ್ಲಿಕೇಶನ್ ಅಥವಾ ಮೈ ಗೌವ್ ಓಪನ್ ಫೋರಂ ಮೂಲಕ ಆನ್‌ಲೈನ್‌ನಲ್ಲಿ ತಮ್ಮ ಅಭಿಪ್ರಾಯಗಳನ್ನು ಹಂಚಿಕೊಳ್ಳಬಹುದು. ಮುಂಬರುವ ಸಂಚಿಕೆಗೆ ಸಲಹೆಗಳನ್ನು ಇದೇ ೨೪ ರವರೆಗೆ ಸ್ವೀಕರಿಸಲಾಗುವುದು.

*******

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಾಲ್ಕು ದಿನಗಳ ಕೇರಳ ಭೇಟಿಗಾಗಿ ಇಂದು ತಿರುವನಂತಪುರಂಗೆ ಆಗಮಿಸಲಿದ್ದಾರೆ. ನಾಳೆ ರಾಷ್ಟ್ರಪತಿಗಳು ಶಬರಿಮಲೆ ದೇವಸ್ಥಾನಕ್ಕೆ ಭೇಟಿ

ನೀಡಿ ದರ್ಶನ ಪಡೆಯಲಿದ್ದಾರೆ. ಗುರುವಾರ ತಿರುವನಂತಪುರದ ರಾಜಭವನದಲ್ಲಿ ಮಾಜಿ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರ ಪ್ರತಿಮೆಯನ್ನು ಅನಾವರಣಗೊಳಿಸಲಿದ್ದಾರೆ. ಶ್ರೀ ನಾರಾಯಣ ಗುರು ಸ್ಮಾರಕದ ಶತಮಾನೋತ್ಸವ ಸಮಾರಂಭದಲ್ಲಿಯೂ ರಾಷ್ಟ್ರಪತಿ ಭಾಗವಹಿಸಲಿದ್ದಾರೆ. ಅಲ್ಲದೆ, ಪಾಲಾದ ಸೇಂಟ್ ಥಾಮಸ್ ಕಾಲೇಜು ಮತ್ತು ಎರ್ನಾಕುಲಂನ ಸೇಂಟ್ ತೆರೇಸಾ ಕಾಲೇಜಿನಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಗವಹಿಸಲಿದ್ದಾರೆ. ರಾಷ್ಟ್ರಪತಿ ಅವರ ಕೇರಳ ಪ್ರವಾಸದ ಬಗ್ಗೆ ನಮ್ಮ ಪ್ರತಿನಿಧಿ ಹೆಚ್ಚಿನ ವಿವರ ನೀಡಿದ್ದಾರೆ.

ಧ್ವನಿ : ಸ್ಮಿತಿ ಎಂ. ಪಲ್ಲುರುತಿ ( ೩೪ ಸೆಕೆಂಡುಗಳು)

*******

ಭಾರತೀಯ ರೈಲ್ವೆ ದೀಪಾವಳಿ ಹಬ್ಬದ ಸಂದರ್ಭದ ಪ್ರಯಾಣಿಕರ ದಟ್ಟಣೆಯನ್ನು ನಿರ್ವಹಿಸಲು ೮ ಸಾವಿರಕ್ಕೂ ಅಧಿಕ ವಿಶೇಷ ರೈಲುಗಳ ಸಂಚಾರ ವ್ಯವಸ್ಥೆಯನ್ನು ಕೈಗೊಂಡಿದೆ. ಹೆಚ್ಚುತ್ತಿರುವ ಬೇಡಿಕೆಗೆ ಅನುಗುಣವಾಗಿ ಅಕ್ಟೋಬರ್ ೧ ರಿಂದ ೧೯ ರವರೆಗೆ  ರೈಲ್ವೆ ೪ ಸಾವಿರಕ್ಕೂ ಅಧಿಕ ವಿಶೇಷ ರೈಲುಗಳ ಕಾರ್ಯಚರಣೆ ನಡೆಸಿದೆ. ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ನವದೆಹಲಿಯಲ್ಲಿ ನಿನ್ನೆ ರಾತ್ರಿ ವಾರ್ ರೂಂಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಅವರು ಹಬ್ಬದ ಸಮಯದಲ್ಲಿ ಪ್ರಯಾಣಿಕರ ಸುಗಮ ಸಂಚಾರಕ್ಕೆ ಕೈಗೊಂಡಿರುವ ಕ್ರಮಗಳನ್ನು ಅವಲೋಕಿಸಿದರು. ಈ ಬಗ್ಗೆ ಹೆಚ್ಚಿನ ವಿವರವನ್ನು ನಮ್ಮ ಪ್ರತಿನಿಧಿ ದಿಲೀಪ್ ಅವರು ನೀಡಿದ್ದಾರೆ.

ಧ್ವನಿ : ದಿಲೀಪ್ ( ೩೪ ಸೆಕೆಂಡುಗಳು)

*******

ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ನೇತಾಜಿ ಸುಭಾಶ್ ಚಂದ್ರಬೋಸ್ ಹಾಗೂ ಅವರು ಕಟ್ಟಿದ ಭಾರತೀಯ ರಾಷ್ಟ್ರೀಯ ಸೇನೆ - ಐಎನ್‌ಎ ಅನ್ನು ಸ್ಮರಿಸಿದ್ದಾರೆ. ಅವರು ತಮ್ಮ ಸಾಮಾಜಿಕ ಮಾಧ್ಯಮ ಪೋಸ್ಟ್ ನಲ್ಲಿ ಆಜಾದ್ ಹಿಂದ್ ಫೌಜ್ ಸಂಸ್ಥಾಪನಾ ದಿನ ಆದ ಇಂದು ಆ ಯೋಧರಿಗೆ ಗೌರವ ನಮನ ಸಲ್ಲಿಸಲಾಗುವುದು. ನೇತಾಜಿ ಅವರು ತಮ್ಮದೇ ಆದ ಸೇನೆ ಮತ್ತು ಮಿಲಿಟರಿ ಹೋರಾಟದ ಮೂಲಕ ಸ್ವಾತಂತ್ರ್ಯವನ್ನು ಪಡೆಯಬಹುದು ಎಂದು ಕ್ರಾಂತಿಕಾರಿಗಳ ಹೃದಯದಲ್ಲಿ ಬಲವಾದ ವಿಶ್ವಾಸವನ್ನು ತುಂಬಿದ್ದರು ಎಂದು ಹೇಳಿದ್ದಾರೆ.

*******

ಫ್ರಾನ್ಸ್‌ನ ಸೆಸ್ಸಾನ್-ಸೆವಿನೆಯ ಗ್ಲಾಜ್ ಅರೇನಾದಲ್ಲಿ ಇಂದಿನಿಂದ ಆರಂಭವಾಗಲಿರುವ ಫ್ರೆಂಚ್ ಓಪನ್ ಬ್ಯಾಡ್ಮಿಂಟನ್ ಟೂರ್ನ್‌ಮೆಂಟ್ ನಲ್ಲಿ, ಭಾರತದ ಅಗ್ರ ಶ್ರೇಯಾಂಕಿತ ಆಟಗಾರರಾದ ಲಕ್ಷ್ಯಸೇನ್, ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಾಂಕಿರೆಡ್ಡಿ ಅವರು ತಮ್ಮ ಅಭಿಯಾನವನ್ನು ಆರಂಭಿಸಲಿದ್ದಾರೆ. ಮಾಜಿ ವಿಶ್ವದ ನಂ. ೧ ಈಗ ವಿಶ್ವ ರ್‍ಯಾಂಕಿಂಗ್ ನಲ್ಲಿ ೬ನೇ ಸ್ಥಾನದಲ್ಲಿರುವ ಪುರುಷರ ಡಬಲ್ಸ್ ಜೋಡಿ ಇತ್ತೀಚೆಗೆ ಹಾಂಕಾಂಗ್ ಹಾಗೂ ಚೀನಾ ಮಾಸ್ಟರ್ಸ್ ನಲ್ಲಿ ಫೈನಲ್‌ಗೇರಿದ್ದು ಕಳೆದವಾರ ಡೆನ್ಮಾರ್ಕ್ ಓಪನ್‌ನಲ್ಲಿ ಸೆಮೀಸ್ ತಲುಪಿತ್ತು. ಫ್ರೆಂಚ್ ಓಪನ್‌ನಲ್ಲಿ ಸುಧಾರಿತ ಪ್ರದರ್ಶನ ನೀಡಿ ಟ್ರೋಫಿ ಗೆಲ್ಲುವ ವಿಶ್ವಾಸದಲ್ಲಿದೆ.

***END****